**ಸೃಷ್ಟಿಯಲ್ಲಿ ಮನುಷ್ಯನೂ ಸೇರಿದಂತೆ ಯಾವ ಪ್ರಾಣಿಯೂ ಮೇಲಲ್ಲ ಅಥವಾ ಕೀಳಲ್ಲ. ಜಗತ್ತಿನಲ್ಲಿ ಬದುಕುವ ಹಕ್ಕು ಸಮಸ್ತ ಜೀವರಾಶಿಗೂ ಇದೆ. ಜೀವಜಾಲದ ಅತ್ಯಂತ ಪುಟ್ಟ ಪ್ರಾಣಿ ಇರುವೆ ತನ್ನ ಸಾಹಸ ಮತ್ತು ಚಮತ್ಕಾರದಿಂದ ದೊಡ್ಡ ಪ್ರಾಣಿಗಳ ಉಪೇಕ್ಷೆಯ ನಡುವೆಯೂ ಹೇಗೆ ತನ್ನ ಪುಟ್ಟ ಮರಿಯನ್ನು ರಕ್ಷಿಸಿತು ಎಂಬ ಕುತೂಹಲಕಾರಿ ಘಟನೆಗಳು ಈ ಕತೆಯಲ್ಲಿ ಹೆಣೆದುಕೊಂಡಿವೆ.**

ಸದಾ ಹರಿಯುವ ಒಂದು ನದಿಯ ಪಕ್ಕದಲ್ಲಿ ಇರುವೆಗಳು ಸಾಲಾಗಿ ಹೊರಟಿದ್ದವು. ಅವುಗಳ ಸಾಲು ಎಷ್ಟು ಉದ್ದವಿತ್ತೆಂದರೆ ನದಿಯ ಉದ್ದಕ್ಕೂ ಸಾಲುಗಟ್ಟಿದಂತೆ ಕಾಣುತ್ತಿತ್ತು. ನದಿಯಿಂದ ಸ್ವಲ್ಪ ದೂರವಿರುವ ಗುಡ್ಡದ ಪಕ್ಕದ ಗೂಡುಗಳಲ್ಲಿ ಲಕ್ಷಾಂತರ ಇರುವೆಗಳು ವಾಸವಾಗಿದ್ದವು. ಒಂದು ತಿಂಗಳಿನಿಂದ ಸುರಿದ ಮಳೆಯ ಕಾರಣ ಅವು ಹೊರಬರಲಾಗಿರಲಿಲ್ಲ. ಈಗ ಮಳೆ ನಿಂತು ಬಿಡುವು ಕೊಟ್ಟಿತ್ತು. ನದಿಯ ದಂಡೆಯಲ್ಲಿ ಹಲವು ಬಗೆಯ ಅಣಬೆಗಳು ರಾಶಿರಾಶಿಯಾಗಿ ಮೇಲೆ ಎದ್ದು ಗಮಗಮಿಸುತ್ತಿದ್ದವು. ಅಂದು ಬಿಸಿಲು ಬಂದಿದ್ದರಿಂದ ಇನ್ನೇನು ಕೊಳೆಯುವ ಹಂತಕ್ಕೆ ಬಂದಿದ್ದವು.

